VIJAYAKUMAR KANNUR
Digitally signed by VIJAYAKUMAR KANNUR
Date: 2026.01.21 16:26:06 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 21.01.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಆರ್ ಡಿ ವಕೀಲರಿಂದ :**

2007 ರ ಫೆಬ್ರುವರಿ ತಿಂಗಳಲ್ಲಿ ನನ್ನ ತಂದೆ ಮೃತ ಪಟ್ಟಿರುವರು. ಆ ಸಮಯದಲ್ಲಿ ನಮ್ಮ ಮನೆತನದ ಹಿರಿತನ ನನ್ನ ತಂದೆ ಮಾಡುತ್ತಿದ್ದರು ಎಂದರೆ ಸಾಕ್ಷಿ ನುಡಿಯುವುದೇನೆಂದರೆ ತಾನು ಪ್ರತ್ಯೇಕವಾಗಿ ವಾಸವಾಗಿರುವುದಾಗಿ ಎಂದು ಉತ್ತರಿಸುವರು. ಈ ಪ್ರತ್ಯೇಕವಾಗಿ ವಾಸವಾಗಿರುವ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನಮ್ಮ ಕುಟುಂಬದ ಹೆಸರಿನಲ್ಲಿ ಮನೆಯ ಆಸ್ತಿ ಒಂದೇ ಇರುವುದು. ನಾನು ಹಾಜರು ಪಡಿಸಿರುವ ನಿಪಿ 73 ರಿಂದ 79 ರ ದಾಖಲೆಗಳು ನನ್ನ ತಂದೆ ಮೃತ ಪಟ್ಟ ನಂತರ ನಾನು ನಮ್ಮ ಕುಟುಂಬದ ಹಿರಿಯ ಮಗನಾಗಿರುವುದರಿಂದ ಅವುಗಳನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಜೊತೆ ಸರಕಾರದವರು ಸುಮಾರು 29 ಜನರಿಗೆ ಜಮೀನಿನ ಹಕ್ಕು ಮಂಜೂರು ಮಾಡಿದ್ದು, ಆ ಎಲ್ಲಾ ವ್ಯಕ್ತಿಗಳು ಸಹ ಆ ಕುಟುಂಬದ ಹಿರಿಯ ಮಗ ಮತ್ತು ಯಜಮಾನರಾಗಿರುವರು ಎಂದರೆ ಸರಿಯಲ್ಲ.

2. ಆತ್ಮರಾಮ ತುಕಾರಾಮ ಕಾಂಬಳೆ ಎಂಬ ವ್ಯಕ್ತಿ ನನಗೆ ಪರಿಚಯ ಇರುವುದು. ಇತನಿಗೆ ಎಷ್ಟು ಜನ ಸಹೋದರರು ಎಂದು ನನಗೆ ಮಾಹಿತಿ ಇರುವುದಿಲ್ಲ. ಆತ್ಮರಾಮನಿಗೆ ಮಂಜೂರು ಮಾಡಿರುವ 4 ಎಕರೆಯ ಜಮೀನಿನಲ್ಲಿ ಆತ್ಮರಾಮ ಮತ್ತು ಆತನ ಸಹೋದರ ತಲಾ 2 ಎಕರೆದಂತೆ ಹಂಚಿಕೊಂಡಿರುವರು ಎಂದರೆ ಸರಿಯಲ್ಲ. ಸರಕಾರದವರು ಆತ್ಮರಾಮನಿಗೆ ಕೇವಲ 2 ಎಕರೆ ಜಮೀನು ಮಂಜೂರು ಮಾಡಿರುವುದಾಗಿ ಎಂದು ಸಾಕ್ಷಿ ಉತ್ತರಿಸುವರು. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರಕಾರ ಮಂಜೂರು ಮಾಡಿರುವ ಆದೇಶದ ದುರುಪಯೋ ಪಡೆದುಕೊಂಡು ನನ್ನ ಸಹೋದರನಾದ ವಾದಿಗೆ ಹಿಸ್ಸಾ ಕೊಡಬಾರದು ಎಂಬ ದುರುದ್ದೇಶದಿಂದ ನಾನು ಉದ್ದೇಶಪೂರಕವಾಗಿ ಸುಳ್ಳು

ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇವತ್ತಿನವರೆಗೂ ನಮ್ಮ ಮನೆತನದ ಆಸ್ತಿಗಳಲ್ಲಿ ನನ್ನ ಮತ್ತು ನನ್ನ ಸಹೋದರನ ಮಧ್ಯೆ ಪಾಲು ವಾಟ್ನಿಯಾಗಿರುವುದಿಲ್ಲ ಎಂಬ ಸಂಗತಿ ಗೊತ್ತಿದ್ದರೂ ಸಹಿತ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ